ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ:ಅ2[2]ಆ.ರೈ.ಮ:01:2015-16 ದಿನಾಂಕ: 18.11.2016

## ಅಧಿಕೃತ ಜ್ಞಾಪನ

*ವಿಷಯ:* ರಾಜ್ಯದಲ್ಲಿ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ರೈತರಿಗೆ ಪರಿಹಾರ ನೀಡುವ ಭಾಗವಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚ ಪರಿಹಾರ ನೀಡುವ ಬಗ್ಗೆ.

*ಉಲ್ಲೇಖ:* 1) ಸರ್ಕಾರದ ಆದೇಶ ಸಂಖ್ಯೆ:ಇಡಿ:227:ಮಾಹಿತಿ:2015, ದಿನಾಂಕ:13.11.2015.
2) ಈ ಕಛೇರಿ ಜ್ಞಾಪನ ದಿನಾಂಕ 20.2.2016 ಮತ್ತು ನೆನಪೋಲೆ ದಿನಾಂಕ:11.07.2016.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ರೈತರು ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಹಂತದವರೆಗೆ ಶಿಕ್ಷಣವನ್ನು ಮುಂದುವರೆಸಲು ಅನುವಾಗುವಂತೆ ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಶುಲ್ಕವನ್ನು ಮರುಪಾವತಿ ಮಾಡುವಂತೆ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಆದೇಶಿಸಲಾಗಿದೆ. ಸದರಿ ಪತ್ರದನ್ವಯ ಉಲ್ಲೇಖ(2)ರ ಜ್ಞಾಪನಾ ಹಾಗೂ ನೆನಪೋಲೆಗಳಲ್ಲಿ ನಿಗಧಿತ ನಮೂನೆಯಲ್ಲಿ ಮಾಹಿತಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಹಂತದವರೆಗೆ ಶಿಕ್ಷಣವನ್ನು ಮುಂದುವರೆಸಲು ಅನುವಾಗುವಂತೆ ಉಚಿತ ಶಿಕ್ಷಣ ಶುಲ್ಕವನ್ನು ಪಾವತಿಸಬೇಕಾಗಿದೆ.

### ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳು ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುವಾಗಲು ಶಿಕ್ಷಣ ಶುಲ್ಕವನ್ನು ಮರುಪಾವತಿಸುವ ಸಂಬಂಧ ಅನುಸರಿಸಬೇಕಾದ ಮಾನದಂಡಗಳು/ಮಾರ್ಗಸೂಚಿ

ಅ) **ಯೋಜನೆಯ ಹೆಸರು:** ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳು ಶಿಕ್ಷಣವನ್ನು ಮುಂದುವರೆಸಲು ಅನುವಾಗಲು ಶೈಕ್ಷಣಿಕ ವೆಚ್ಚದ ಪರಿಹಾರ ನೀಡುವುದು.

ಆ) **ಫಲಾನುಭವಿಗಳು ಮತ್ತು ಯೋಜನೆಯ ವ್ಯಾಪ್ತಿ:** ಫಲಾನುಭವಿ ಎಂದರೆ, ರಾಜ್ಯದ ರೈತರು ಆತ್ಮಹತ್ಯೆಗೆ ತುತ್ತಾದ ಅವಲಂಬಿತ ಕುಟುಂಬದ ಸದಸ್ಯರುಗಳಲ್ಲಿ ಶಾಲಾ-ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ.

ಇ) **ಯೋಜನೆಯ ವಿನ್ಯಾಸ:** ಈ ಯೋಜನೆಯನ್ನು ರಾಜ್ಯದ ರೈತರು ಆತ್ಮಹತ್ಯೆಗೆ ತುತ್ತಾದ ಅವಲಂಬಿತ ಮಕ್ಕಳು ಶಾಲಾ-ಕಾಲೇಜು ಶಿಕ್ಷಣವನ್ನು ಮುಂದುವರೆಸಲು ಅನುವಾಗಲು ಅವರಿಗೆ ಪರಿಹಾರ ರೂಪದಲ್ಲಿ ಶಿಕ್ಷಣ ಶುಲ್ಕವನ್ನು ವಾರ್ಷಿಕವಾಗಿ ನೀಡುವುದು.

- 01.04.2015ರ ನಂತರ ಆತ್ಮಹತ್ಯೆಗೆ ತುತ್ತಾದ ರೈತರ ಅವಲಂಬಿತ ಮಕ್ಕಳಿಗೆ 2017-18 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಆರ್.ಟಿ.ಇ. ಅಡಿಯಲ್ಲಿ ಶಾಲೆಗಳ ಪ್ರವೇಶಕ್ಕೆ ಆದ್ಯತೆ ನೀಡುವುದು.

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಶುಲ್ಕ ಮರುಪಾವತಿ ಮಾಡತಕ್ಕದ್ದು.

1. ರೈತರು ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಸಾಲದ ಹೊರೆ ಆತ್ಮಹತ್ಯೆಗೆ ಕಾರಣವೆಂಬ ವಿಷಯವನ್ನು ಪ್ರತಿ ಉಪವಿಭಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯು ದೃಢೀಕರಿಸಿರುತ್ತದೆ.
2. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಇವರು ರೈತರ ಆತ್ಮಹತ್ಯೆ ಮರಣಾನಂತರ ಪರಿಹಾರ ನೀಡುವ ಸಂದರ್ಭದಲ್ಲಿ ಸದರಿಯವರ ಕುಟುಂಬಕ್ಕೆ ನೀಡಲಾಗಿರುವ ಪರಿಹಾರ ಮಂಜೂರಾತಿ ಪತ್ರವನ್ನು ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸಲ್ಲಿಸುವುದು.
3. ಗುರುತಿನ ಪುರಾವೆಗಾಗಿ ಇತರೆ ಯಾವುದೇ ದಾಖಲೆಗಳು ಅಂದರೆ, ವಿದ್ಯಾರ್ಥಿಯ ಗುರುತಿನ ಚೀಟಿ(ಐ.ಡಿ) ಅಥವಾ ಪೋಷಕರು ಮತ್ತು ಮಗುವಿನ ಸಂಬಂಧವನ್ನು ದೃಢೀಕರಿಸುವ ಸಂಬಂಧ ಆಯಾ ಶಾಲಾ ಮುಖ್ಯಸ್ಥರು ನೀಡಲಾದ ದೃಢೀಕರಣ ಪತ್ರವನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸಲ್ಲಿಸುವುದು.
4. ಈ ಯೋಜನೆಯು ದಿನಾಂಕ 01-04-2015 ರ ನಂತರ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ಅನ್ವಯಿಸುತ್ತದೆ.
5. ಈ ಶುಲ್ಕ ಮರುಪಾವತಿಯನ್ನು 2016-17 ನೇ ಶೈಕ್ಷಣಿಕ ವರ್ಷಕ್ಕೆ ಮಾಡಲಾಗುವುದು. ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ಬೋಧನಾ ಶುಲ್ಕ ರೂ.24,000/-ಗಳಿಗೆ ಮಿತಿಗೊಳಿಸಿ ಪಾವತಿಸುವುದು.
6. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳು ಹಾಸ್ಟೆಲ್ ವಸತಿ ಇಚ್ಚಿಸಿದಲ್ಲಿ, ಅಂತಹ ಮಕ್ಕಳಿಗೆ ಸರ್ಕಾರಿ ವಸತಿ ಗೃಹದಲ್ಲಿ ವ್ಯವಸ್ಥೆ ಕಲ್ಪಿಸಲು ಸಂಬಂಧಿಸಿದ ಉಪನಿರ್ದೇಶಕರುಗಳು ಕ್ರಮ ವಹಿಸುವುದು.
7. ಈ ಸಂಬಂಧ ಅನುದಾನ ರೂ.1,00,000/-(ರೂ.ಒಂದುಲಕ್ಷ)ಗಳನ್ನು ಶುಲ್ಕ ಮರುಪಾವತಿ ಸಂಬಂಧ ಕ್ರಮವಹಿಸಲು ಸಂಬಂಧಿಸಿದ ಉಪನಿರ್ದೇಶಕರುಗಳಿಗೆ ವಿತರಿಸಲಾಗುತ್ತಿದೆ.
8. ಸಂಬಂಧಿಸಿದ ಉಪನಿರ್ದೇಶಕರುಗಳು ಪ್ರತಿಯೊಂದು ಮರುಪಾವತಿ ಪ್ರಕರಣಕ್ಕೂ ದಾಖಲಾತಿಯನ್ನು ಪರಿಶೀಲಿಸಿ, ಖಾತ್ರಿ ಪಡಿಸಿಕೊಂಡು ಖಜಾನೆ ಚೆಕ್ ಮೂಲಕ ಮರುಪಾವತಿ ಮಾಡಲು ಕ್ರಮವಹಿಸುವುದು. (ಚೆಕ್ ಮೂಲಕ ಅಥವಾ ಬ್ಯಾಂಕ್ ಮೂಲಕವೇ ಹಣ ವರ್ಗಾವಣೆ ಮಾಡುವುದು) ನಂತರ ಫಲಾನುಭವಿಗಳ ವಿವರವನ್ನು ತಃಖ್ತೆಯಲ್ಲಿ ತಯಾರಿಸಬೇಕು.

9. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಶುಲ್ಕವನ್ನು ಪರಿಹಾರದ ರೂಪದಲ್ಲಿ ವಿತರಿಸಲು ಡ್ರಾ ಮಾಡಿದ ಹಣವನ್ನು ಯಾವುದೇ ಕಾರಣಕ್ಕೂ ಉಪನಿರ್ದೇಶಕರುಗಳು ಬ್ಯಾಂಕ್‌ನಲ್ಲಿ ಇಟ್ಟುಕೊಳ್ಳುವಂತಿಲ್ಲ. ಒಂದು ಬಾರಿ ಬಿಡುಗಡೆಯಾದ ಹಣವನ್ನು ಕೂಡಲೇ ಉಪಯೋಗಿಸಿಕೊಂಡು, ಉಪಯೋಗಿತಾ ಪ್ರಮಾಣ ಪತ್ರವನ್ನು ಪಡೆಯಲು ಉಪನಿರ್ದೇಶಕರು ಕ್ರಮ ವಹಿಸುವುದು.
10. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳು 2016-17ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಂಡಿದ್ದರೆ, ಆ ಪರೀಕ್ಷೆಗೆ ನಿಗಧಿಪಡಿಸಿದ ಒಟ್ಟು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿರವರು ಸಂಪೂರ್ಣ ವಿನಾಯಿತಿಯನ್ನು ನೀಡುವುದು. ಈ ಸಂಬಂಧ ಪೂರಕ ದಾಖಲೆಗಳನ್ನು ಸಂಬಂಧಿಸಿದ ಶಾಲಾ ಕಾಲೇಜುಗಳಿಂದ ಪಡೆಯುವುದು.
11. ದಿನಾಂಕ:01.04.2015 ರ ನಂತರ ಆತ್ಮಹತ್ಯೆ ಮಾಡಿಕೊಂಡ ರೈತರ ಮರಣಾನಂತರ ಪರಿಹಾರ ನೀಡುವ ಸಂದರ್ಭದಲ್ಲಿ, ಸದರಿಯವರ ಕುಟುಂಬಕ್ಕೆ ನೀಡಲಾಗಿರುವ ಪರಿಹಾರ ಸಂಬಂಧ ಫಲಾನುಭವಿಗಳ ಪಟ್ಟಿಯನ್ನು (List) ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರು, ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಇವರಿಂದ ಪಡೆದು ಕ್ರಮವಹಿಸುವುದು. ಸದರಿ ಪಟ್ಟಿಯನ್ನು ಆದರಿಸಿ ಆತ್ಮಹತ್ಯೆ ಮಾಡಿಕೊಂಡ ರೈತರ ವಿವರಗಳನ್ನು ಅನುಬಂಧಿಸಿರುವ ನಮೂನೆ-1 ರಲ್ಲಿ ಭರ್ತಿ ಮಾಡಲು ಕ್ರಮವಹಿಸುವುದು.
12. ಆಯಾ ಜಿಲ್ಲೆಯ ಉಪನಿರ್ದೇಶಕರುಗಳು ಶುಲ್ಕ ಮರುಪಾವತಿಸಿದ ಕುರಿತು ಅನುಬಂಧಿಸಿರುವ ನಮೂನೆ-2ರಲ್ಲಿನ ಮಾಹಿತಿಯಂತೆ ಕ್ರೋಢೀಕೃತ ವರದಿಯನ್ನು **"ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು ಹಾಗೂ ಉಸ್ತುವಾರಿ ಅಧಿಕಾರಿಗಳು"** ಇವರಿಗೆ ಸಲ್ಲಿಸುವುದು.

ಮೇಲ್ಕಂಡಂತೆ ಎಲ್ಲಾ ಪೂರಕ ಮಾಹಿತಿಗಳನ್ನು ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಕ್ರೋಢೀಕರಿಸಿ ಕೂಲಂಕಷವಾಗಿ ಪರಿಶೀಲಿಸಿ ಲೆಕ್ಕಶೀರ್ಷಿಕೆ 2202-80-800-0-49 (ಯೋಜನೆ) ಯಡಿಯಲ್ಲಿ ಖಾತ್ರಿ ಪಡಿಸಿಕೊಂಡು ಪರಿಹಾರವನ್ನು ಫಲಾನುಭವಿ ಮಕ್ಕಳ ಖಾತೆಗೆ ಜಮಾ ಮಾಡಲು ಕ್ರಮವಹಿಸುವುದು.

(ಪೌಲ್ಸ್)
ಆಯುಕ್ತರು

***ಇವರಿಗೆ:***

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ / ಧಾರವಾಡ ಆಯುಕ್ತಾಲಯ.
2. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
3. ರಾಜ್ಯದ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರ ಅಗತ್ಯ ಕ್ರಮಕ್ಕಾಗಿ.

4. ರಾಜ್ಯದ ಎಲ್ಲಾ ಉಪವಿಭಾಗಾಧಿಕಾರಿಗಳು, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ತಹಶೀಲ್ದಾರರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ತುರ್ತು ಕ್ರಮಕ್ಕಾಗಿ.

ಪ್ರತಿಯನ್ನು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ( ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರುರವರ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ.
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು ರವರ ಮಾಹಿತಿಗಾಗಿ.
4. ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರುರವರ ಮಾಹಿತಿಗಾಗಿ.
5. ಕಛೇರಿ ಪ್ರತಿ.

## : ನಮೂನೆ-1 :

| ಕ್ರ.ಸಂ. | ಆತ್ಮಹತ್ಯೆ ಮಾಡಿಕೊಂಡ ರೈತರ ಹೆಸರು | ಆತ್ಮಹತ್ಯೆ ಮಾಡಿಕೊಂಡ ಸ್ಥಳ ಗ್ರಾಮ/ತಾಲ್ಲೂಕು/ಜಿಲ್ಲೆ | ಮರಣ ದಿನಾಂಕ | ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಇವರು ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರ ಮಂಜೂರಾತಿ ಆದೇಶ ಸಂಖ್ಯೆ ಮತ್ತು ದಿನಾಂಕ | ( ತರಗತಿ 1-12) ವ್ಯಾಸಂಗ ಮಾಡುತ್ತಿರುವ ಮಕ್ಕಳ ಹೆಸರು | ಮಕ್ಕಳು ವ್ಯಾಸಂಗ ಮಾಡುತ್ತಿರುವ ತರಗತಿ | ವ್ಯಾಸಂಗ ಮಾಡುತ್ತಿರುವ ' ಶಾಲೆಯ ಹೆಸರು ಮತ್ತು ವಿಳಾಸ | ಶಾಲಾ ಆಡಳಿತ ಮಂಡಳಿಯ ವಿಧ | ವಾರ್ಷಿಕ ಬೋಧನಾ ಶುಲ್ಕ(ರೂ. ಗಳಲ್ಲಿ) | ಮಕ್ಕಳು ಸನಿವಾಸ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ವಾರ್ಷಿಕವಾಗಿ ತಗಲುವ ವಸತಿ ಶುಲ್ಕ ಮತ್ತು ಬೋಧನಾ ಶುಲ್ಕ (ರೂ.ಗಳಲ್ಲಿ) |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| | | | | | | | | | | |

* ಈ ಅಂಕಿಅಂಶಗಳ ಮತ್ತು ಮಾಹಿತಿಗಳ ದೃಢೀಕೃತ ದಾಖಲೆಗಳನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದು ಕ್ರಮವಹಿಸುವುದು.

## ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ರವರಿಂದ ಉಸ್ತುವಾರಿ ಹಾಗೂ ಮೇಲ್ವಿಚಾರಣೆ

## ಪ್ರತಿ ಮಾಹೆಯಾನ ಜಿಲ್ಲಾ ಉಪನಿರ್ದೇಶಕರುಗಳಿಂದ ಈ ಬಗ್ಗೆ ಮಾಹಿತಿಯನ್ನು ಪಡೆದು ಕ್ರೋಢೀಕರಿಸುವ ನಮೂನೆ-2

| ಕ್ರ.ಸಂ. | ಜಿಲ್ಲೆಯ ಹೆಸರು | ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳ ಒಟ್ಟು ಪ್ರಕರಣಗಳ ಸಂಖ್ಯೆ | 2202-80-800-0-49(ಯೋಜನೆ) ಅಡಿಯಲ್ಲಿ ಬಿಡುಗಡೆಯಾದ ಒಟ್ಟು ಅನುದಾನ(ರೂ.ಗಳಲ್ಲಿ) | ಒಟ್ಟು ಮರುಪಾವತಿ ಮಾಡಿದ ಅನುದಾನ(ರೂ.ಗಳಲ್ಲಿ) | ಉಳಿಕೆ ಅನುದಾನ (ರೂ.ಗಳಲ್ಲಿ) | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |
| | | | | | | |